**ಓ.ಎಸ್.ನಂ. :35/2020**

**ಪಿ.ಡಬ್ಲ್ಯೂಃ** 1

ಸಾಕ್ಷಿಯನ್ನು ದಿಃ 04-08-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಗಳ ಪರಃ ಶ್ರೀ.ಡಿ.ಎಸ್.ಬಿ ವಕೀಲರಿಂದಃ**

ಪ್ರಸ್ತುತ ವಾದ ಪತ್ರವನ್ನು ಹಾಗೂ ಕಚ್ಚಾ ನಕಾಶೆಯನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಬಸ್ತಿಪೇಟೆಯ ಮುಖ್ಯ ರಸ್ತೆಯ ಪೂರ್ವ ದಿಕ್ಕಿಗೆ ದಾವಾ ಸ್ವತ್ತುಗಳು ಇರುತ್ತವೆ. ಬಸ್ತಿಪೇಟೆಯ ಮುಖ್ಯ ರಸ್ತೆಯಿಂದ ದಾವಾ ಅನುಸೂಚಿ 4 ಐಟಂ ಸ್ವತ್ತಿನವರೆಗೆ ಹಾಕಲಾದ ಇಂಟರಲಾಕ್ ರಸ್ತೆಯು ಯಾವ ಸರ್ವೆ ನಂಬರದಲ್ಲಿ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ಇಂಟರಲಾಕ್ ರಸ್ತೆಯನ್ನು ನಿರ್ಮಿಸಲಾದ ಸ್ವತ್ತಿನ ಮಾಲೀಕರ ಹೆಸರು ನನಗೆ ತಿಳಿದಿಲ್ಲ. ಇಂಟರಲಾಕ್ ರಸ್ತೆಯ ಅಗಲ ಸುಮಾರು 4 ಫೂಟು ಇದ್ದು, ಉದ್ದ

ಹೇಳಲು ಆಗುವುದಿಲ್ಲ. ಇಂಟರಲಾಕ್ ಅಳವಡಿಸಿ ರಸ್ತೆಯನ್ನು ಈ ದಾವೆಯನ್ನು ಸಲ್ಲಿಸುವ ಸುಮಾರು 2 ರಿಂದ 3 ವರ್ಷಗಳ ಪೂರ್ವದಲ್ಲಿ ನಿರ್ಮಿಸಲಾಗಿರುತ್ತದೆ. ಇಂಟರಲಾಕ್ ಅಳವಡಿಸಲಾದ ರಸ್ತೆಯು ಇರುವ ಸ್ವತ್ತು ಯಾರ ಮಾಲೀಕತ್ವಕ್ಕೆ ಸೇರಿದ್ದು ಹಾಗೂ ಸ್ವತ್ತನ್ನು ಸ್ವಾಧೀನ ಪಡಿಸಿಕೊಂಡಿದ್ದಾರೋ ಇಲ್ಲವೋ ಎಂಬ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ. ಸಾಕ್ಷಿಯು ಪುರಸಭೆಯವರು ರಸ್ತೆ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಸುಮಾರು 2011 ನೇ ಸಾಲಿನಲ್ಲಿ ಠರಾವನ್ನು ಮಾಡಿ, ಇಂಟರಲಾಕ್ ರಸ್ತೆ ನಿರ್ಮಿಸಿದ್ದು, ಪುರಸಭೆಯವರ ಕಾಮಗಾರಿ ಅದ ಕಾರಣ ಸದ್ರಿ ರಸ್ತೆಯ ಸ್ವತ್ತಿಗೆ ಸಂಬಂಧಪಟ್ಟಂತೆ ಮಾಲೀಕರ ಹಾಗೂ ಭೂಸ್ವಾಧೀನಗೊಂಡ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ.

ದಾವಾ ಅನುಸೂಚಿ 4 ನೇ ಐಟಂ ಸ್ವತ್ತಿನ ಸ್ವತ್ತು ವಿಸ್ತೀರ್ಣ 6 ಗುಂಟೆ 8 ಆಣೆ ಆಗಿರುತ್ತದೆ. ದಾವಾ ಅನುಸೂಚಿ 4 ನೇ ಐಟಂ ಸ್ವತ್ತಿನ ಒಟ್ಟೂ ಕ್ಷೇತ್ರದ ಪೈಕಿ 3 ಗುಂಟೆ 4 ಆಣೆ ಪ್ರತಿವಾದಿಗಳಿಗೆ ಸೇರಿದ್ದು, ಉಳಿದ 3 ಗುಂಟೆ 4 ಆಣೆ ಕ್ಷೇತ್ರ ಶಿವರಾಮರವರಿಗೆ ಸೇರಿದ್ದಾಗಿರುತ್ತದೆ ಎಂದರೆ ಸಾಕ್ಷಿಯು ಸದ್ರಿ ಕ್ಷೇತ್ರದಲ್ಲಿ 0.0.8 ಆಣೆ ಕ್ಷೇತ್ರ ಖರಾಬ ಇದ್ದು ಉಳಿದ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ 1 ಮತ್ತು 2 ನೇ ಪ್ರತಿವಾದಿಗಳು ಹಾಗೂ ಶಿವರಾಮ ರವರ ವಾರಸುದಾರರ ಹೆಸರುಗಳು ಜಂಟಿಯಾಗಿ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಸದ್ರಿಯವರುಗಳಿಗೆ ದಾವಾ ಅನುಸೂಚಿ 4 ನೇ ಐಟಂ ಸ್ವತ್ತುಗಳಲ್ಲಿ ಎಷ್ಟು ಕ್ಷೇತ್ರಕ್ಕೆ ಸಂಬಂಧಪಟ್ಟತೆ ಹಕ್ಕು ಇದೆ ಎಂದು ನನಗೆ ತಿಳಿದಿಲ್ಲ. ನಾನು ಹೇಳಿದಂತಹ ದಾವಾ ಅನುಸಾುಚಚಿ 4 ನೇ ಐಟಂ ಸ್ವತ್ತಿನಲ್ಲಿ ಇರುವಂತಹ 8 ಆಣೆ ಖರಾಬ ರಸ್ತೆಗೆ ಸಂಬಂಧಪಟ್ಟಿದ್ದಾಗಿರಬಹುದು. ನಾನು ಪ್ರಸ್ತುತ

ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಸದ್ರಿ ಖರಾಬನ ಸ್ವರೂಪವನ್ನು ದಾಖಲಾತಿಗಳ ಮೂಲಕ ಪರಿಶೀಲಿಸಿರುವುದಿಲ್ಲ. ನಾನು ಹೇಳುವಂತಹ ಖರಾಬಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಪರಿಶೀಲಿಸಿ ಅದನ್ನು ಹಾಜರುಪಡಿಸಲು ತೊಂದರೆ ಇರಲಿಲ್ಲ. ದಾವಾ 4 ನೇ ಐಟಂ ಸ್ವತ್ತಿನಲ್ಲಿ 1 ಹಾಗೂ 2 ನೇ ಪ್ರತಿವಾದಿಗಳ ಹಾಗೂ ಶಿವರಾಮರವರ ವಾರಸುದಾರರ ವಹಿವಾಟಿನಲ್ಲಿ ಇರುವ ಕ್ಷೇತ್ರಗಳು ಎಷ್ಟು ಎಂದು ಹೇಳಲು ಆಗುತ್ತದಾ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಾಗಿ ವಹಿವಾಟು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಾನು ಪ್ರಸ್ತುತ ದಾವೆಯಲ್ಲಿ ಶಿವರಾಮರವರ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ಶಿವರಾಮರವರ ವಾರಸುದಾರರ ವಹಿವಾಟಿ ಕ್ಷೇತ್ರದಲ್ಲಿ ಇರುವ ದಾರಿಗೆ ಸಂಬಂಧಪಟ್ಟಂತೆ ಯಾವುದೇ ಆತಂಕ ಅಥವಾ ತಕರಾರು ಉದ್ಭವಿಸದೇ ಇರುವ ಕಾರಣ ಅವರುಗಳನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಪ್ರಸ್ತುತ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನಾನು ದಾವಾ ಅನುಸೂಚಿ 4 ನೇ ಐಟಂಗೆ ಸಂಬಂಧಪಟ್ಟತೆ ಪಹಣಿ ಪತ್ರಿಕೆ, ನಕಾಶೆ ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ವಕೀಲರಿಗೆ ನೀಡಿರುತ್ತೇನೆ. ಪ್ರಸ್ತುತ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ 4 ನೇ ಐಟಂ ಸ್ವತ್ತಿಗೆ ಸಂಬಂಧಪಟ್ಟಂತೆ 1 ಹಾಗೂ 4 ನೇ ಪ್ರತಿವಾದಿಗಳಿಗೆ ಹಾಗೂ ಶಿವರಾಮರವರಿಗೆ ಹೇಗೆ ಹಕ್ಕು ಪ್ರಾಪ್ತವಾಗಿದೆ ಎಂಬ ಬಗ್ಗೆ ತಿಳಿದುಕೊಂಡಿದ್ದು, ಭೂ-ನ್ಯಾಯ ಮಂಡಳಿಯಿಂದ ಮಂಜೂರಾತಿಯ ಬಗ್ಗೆ ಅವರುಗಳಿಗೆ ಹಕ್ಕು ಪ್ರಾಪ್ತವಾಗಿರುವುದು ತಿಳಿದು ಬಂದಿರುತ್ತದೆ.

**ಓ.ಎಸ್.ನಂ. :35/2020**
**ಪಿ.ಡಬ್ಲ್ಯೂ:** 1

ನಾನು ದಾವೆಯಲ್ಲಿ ಹೇಳಿರುವಂತಹ ಕಾಲುದಾರಿಯು ದಾವಾ 4 ನೇ ಐಟಂ ಸ್ವತ್ತಿನಲ್ಲಿ ಎಷ್ಟು ಉದ್ದದವರೆಗೆ ಹಾಯ್ದಿರುತ್ತದೆ ಎಂದರೆ ಹೇಳಲು ಆಗುವುದಿಲ್ಲ. ಬಸ್ತಿಪೇಟೆಯ ರಸ್ತೆಯ ಪೂರ್ವ ದಿಕ್ಕಿನಿಂದ ದಕ್ಷಿಣ ದಿಕ್ಕಿಗೆ ನಾನು ಹೇಳುವಂತಹ ದಾರಿಯು ಹಾಯ್ದಿರುತ್ತದೆ. ದಾವಾ 4 ನೇ ಐಟಂ ಸ್ವತ್ತಿನಲ್ಲಿ ಅನಾದಿ ಕಾಲದಿಂದ ಅಂದರೆ ಸುಮಾರು 80 ರಿಂದ 83 ವರ್ಷಗಳ ಹಿಂದಿನಿಂದ ನಾನು ಹೇಳುವಂತಹ ಕಾಲುದಾರಿ ಅಸ್ತಿತ್ವದಲ್ಲಿ ಇರುತ್ತದೆ. ನಾನು ಹೇಳುವಂತಹ ಕಾಲು ದಾರಿಯು ಸರ್ವೆ ನಕಾಶೆಯಲ್ಲಿ ನಮೂದು ಇರುವುದಿಲ್ಲ. ಸಾಕ್ಷಿಯು ಮುಂದುವರಿದು ಆದರೆ ವಾಂಟಣಿ ದಾವೆಯಲ್ಲಿ ಸರ್ವೆ ನಂಬರ 482 ರಲ್ಲಿ ಇರುವ ಬಾವಿ ಹಾಗೂ ಕಾಲುದಾರಿಯನ್ನು ಎಲ್ಲರೂ ಉಪಯೋಗಿಸಿ ಬರುವಂತಹ ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಅಡ್ಡಿ ಆತಂಕ ಉಂಟು ಮಾಡಬಾರದು ಎಂಬ ಬಗ್ಗೆ ಉಲ್ಲೇಖಿಸಲಾಗಿದ್ದು, ಆ ಬಗ್ಗೆ ಹಕ್ಕುಗಳ ಪತ್ರಿಕೆಯಲ್ಲಿ ನಮೂದು ಸಹ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಹಕ್ಕುಗಳ ಪತ್ರಿಕೆಯಲ್ಲಿ ಉಲ್ಲೇಖಿಸಲಾದ ವಾಂಟಣಿಗೆ ಸಂಬಂಧಪಟ್ಟ ವ್ಯಾಜ್ಯದಲ್ಲಿ ಯಾರು ಯಾರು ಪಕ್ಷಗಾರರು ಇದ್ದರು ಎಂಬುವುದನ್ನು ನಾನು ತಿಳಿದುಕೊಂಡಿರುವುದಿಲ್ಲ.

ಸರ್ವೆ ನಂಬರ 482 ರಲ್ಲಿ ಬಹಳಷ್ಟು ಹಿಸ್ಸಾಗಳು ಇದ್ದು, ಅವುಗಳನ್ನು ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಂಬರ 482/2 ರಲ್ಲಿ ಸರ್ವೆ ನಂಬರ 482/2 ಎ ಯಿಂದ 482/2 ಹೆಚ್ ವರೆಗೆ ಹಿಸ್ಸಾಗಳಾಗಿರುತ್ತವೆ. 482/2 ಎ ಯಿಂದ 482/2 ಹೆಚ್ ವರೆಗೆ ಯಾವ ಸಾಲಿನಲ್ಲಿ ಹಿಸ್ಸಾ ಪೋಡಿ ಆಗಿರುತ್ತದೆ ಎಂದು ನನಗೆ ಮಾಹಿತಿ ಇಲ್ಲಾ. ಸರ್ವೆ ನಂಬರ 482/2

ರಲ್ಲಿ ನನ್ನ ಹಕ್ಕಿಗೆ ಸೇರಿದಂತಹ ಸ್ವತ್ತುಗಳ ಪೋಡಿ ಹಿಸ್ಸಾ ಯಾವ ಸಾಲಿನಲ್ಲಿ ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ.

ದಾವಾ 1 ನೇ ಐಟಂ ಸ್ವತ್ತಿನಲ್ಲಿ ಎಷ್ಟು ಮನೆಗಳು ಇವೆ ಎಂದು ಹೇಳಲು ಆಗುತ್ತದಾ ಎಂದರೆ ಸಾಕ್ಷಿಯು ಒಂದೇ ಸರ್ವೆ ನಂಬರದಲ್ಲಿ ಮನೆಗಳು ಇರುವುದಿಲ್ಲ, ಎರಡು ಮನೆಗಳು ಒಂದು ದಾವಾ ಅನುಸೂಚಿ 1 ರಿಂದ 3 ನೇ ಐಟಂ ಸ್ವತ್ತುಗಳಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ಎರಡು ಮನೆಗಳ ಪೈಕಿ ಒಂದು ಮನೆ ನನಗೆ ಸೇರಿದ್ದು, ಮತ್ತೊಂದು ನಮ್ಮ ಚಿಕ್ಕಪ್ಪನವರಾದ ವಾಮನ ರವರಗೆ ಸೇರಿದ್ದಾಗಿರುತ್ತದೆ. ನನ್ನ ಚಿಕ್ಕಪ್ಪನಿಗೆ ಸೇರಿದ ಮನೆಯಲ್ಲಿ ಅವರ ಮಗನಾದ ಶೇಖರ ಹಾಗೂ ಮಂಜುನಾಥ ರವರು ವಾಸ್ತವ್ಯ ಹೂಡಿ ಬಂದಿರುತ್ತಾರೆ. ಸದ್ರಿಯವರುಗಳು ತಮ್ಮ ಓಡಾಟಕ್ಕೆ ನಾನು ದಾವೆಯಲ್ಲಿ ಹೇಳಿರುವಂತಹ ದಾರಿಯನ್ನೇ ಉಪಯೋಗಿಸಿ ಬಂದಿರುತ್ತಾರೆ.

ದಾವಾ ಅನುಸೂಚಿ 4 ನೇ ಐಟಂ ಸ್ವತ್ತುನಲ್ಲಿ ಒಂದು ಮನೆ ಇದ್ದು, ಅದು ಪ್ರಸ್ತುತ ದಾವೆಯ ಪ್ರತಿವಾದಿಗಳಿಗೆ ಸೇರಿದ್ದಾಗಿರುತ್ತದೆ. ಸರ್ವೆ ನಂಬರ 482/2 ಅ ದಲ್ಲಿ ಪಾರ್ವತಿ ಶಿವರಾಮ ನಾಯಕ ರವರ ಮನೆ ಇರಬಹುದು. ಸರ್ವೆ ನಂಬರ 482/2 ಅ ಗೆ ಸಂಬಂಧಪಟ್ಟಂತೆ ಕಂದಾಯ ದಾಖಲಾತಿಗಳನ್ನು ಮಾನ್ಯ ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಸರ್ವೆ ನಂಬರ 482/2 ಅ ದ ಸ್ವತ್ತಿಗೆ ಸಂಬಂಧಪಟ್ಟಂತೆ ಯಾರು ಹಕ್ಕುದಾರರು ಇರುತ್ತಾರೆ ಎಂಬ ಬಗ್ಗೆ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದ್ದು, ಸದ್ರಿ ಸ್ವತ್ತು ಪಾರ್ವತಿ

ಶಿವರಾಮ ನಾಯಕರವರ ಕುಟುಂಬಕ್ಕೆ ಸೇರಿದ್ದಾಗಿರುತ್ತದೆ. ಪ್ರತಿವಾದಿಗಳ ವಾಸ್ತವ್ಯದ ಮನೆ ಸರ್ವೆ ನಂಬರ 482/2 ಇ 1 ರಲ್ಲಿ ಇದ್ದು, ನಾನು ಹೇಳುವಂತೆ ದಾವಾ 4 ನೇ ಐಟಂ ಸ್ವತ್ತಿನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಗಳ ಮನೆ ಸರ್ವೆ ನಂಬರ 482/2 ಎ 1 ರಲ್ಲಿ ಹಾಗೂ ದಾವಾ 4 ನೇ ಐಟಂ ಸ್ವತ್ತಿನಲ್ಲಿ ಸೇರಿದಂತೆ ಇದೆ ಎಂದು ನುಡಿಯುತ್ತಾರೆ.

ಪ್ರತಿವಾದಿಗಳ ಮನೆಯು ಪೂರ್ವಾಭಿಮುಖವಾಗಿದೆ ಎಂದರೆ ಸರಿ. ಪ್ರತಿವಾದಿಗಳು ಸರಕಾರದ ಆಶ್ರಯ ಯೋಜನೆಯಡಿಯಲ್ಲಿ ಹಣ ಪಡೆದು ಮನೆ ನಿರ್ಮಿಸಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ 482/2 ಇ 1 ರ ಕ್ಷೇತ್ರ 4 ಗುಂಟೆ 4 ಆಣೆ ಇದೆ ಎಂದರೆ ಸರಿ. ಸದ್ರಿ ಸರ್ವೆ ನಂಬರ 482/2 ಇ 1 ರಲ್ಲಿ ಯಾವುದೇ ಖರಾಬ ಇರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ 482/2 ಇ 1 ರ ಪಹಣಿ ಪತ್ರಿಕೆಯಲ್ಲಿ ಸದ್ರಿ ಸ್ವತ್ತು ಪ್ರತಿವಾದಿಗಳ ಖುದ್ ಕಬ್ಜಾದಲ್ಲಿ ಇರುವ ಮಾಲ್ಕಿ ಹಕ್ಕಿನ ಸ್ವತ್ತು ಎಂದು ಉಲ್ಲೇಖ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ 482/2 ಇ 1 ರಲ್ಲಿನ 4 ಗುಂಟೆ 4 ಆಣೆ ಕ್ಷೇತ್ರದ ಸ್ವಾಧೀನ ಅನುಭವದಲ್ಲಿ ಪ್ರತಿವಾದಿಗಳು ಇದ್ದಾರೆ ಎಂದರೆ ಸರಿ. ನಾನು ಪ್ರಸ್ತುತ ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ವಕೀಲರಿಗೆ ಮಾಹಿತಿ ನೀಡುವಾಗ ಪಾರ್ವತಿ ಶಿವರಾಮ ನಾಯ್ಕು ರವರ ಮನೆ ಸರ್ವೆ ನಂಬರ 482/2 ಅ ದಲ್ಲಿ ಇರುವ ಬಗ್ಗೆ ತಿಳಿಸಿರುತ್ತೇನೆ. ನಾನು ಮಾಹಿತಿ ನೀಡುವ ಸಂದರ್ಭದಲ್ಲಿ ಪಾರ್ವತಿ ಶಿವರಾಮ ನಾಯ್ಕು ರವರ ಮನೆ ದಾವಾ 4 ನೇ ಐಟಂ ಸ್ವತ್ತಿನಲ್ಲಿ ಇರುವ ಬಗ್ಗೆ ವಕೀಲರಿಗೆ ತಿಳಿಸಿರುವುದಿಲ್ಲ.

**ಓ.ಎಸ್.ನಂ. :35/2020**

**ಪಿ.ಡಬ್ಲ್ಯೂಃ** 1

ಸರ್ವೆ ನಂಬರ 482/2 ಅ ದ ಸ್ವತ್ತು ದಾವಾ 4 ನೇ ಐಟಂ ಸ್ವತ್ತಿನ ಉತ್ತರ ದಿಕ್ಕಿಗೆ ಇರುತ್ತದೆ. ದಾವಾ 4 ಮತ್ತು 5 ನೇ ಐಟಂ ಸ್ವತ್ತುಗಳು ಪರಸ್ಪರ ಹೊಂದಿಕೊಂಡಂತೆ ಇದೆ ಎಂದರೆ ಸರಿ. ದಾವಾ 4 ನೇ ಐಟಂ ಸ್ವತ್ತಿನ ದಕ್ಷಿಣ ದಿಕ್ಕಿಗೆ ದಾವಾ 5 ನೇ ಐಟಂ ಸ್ವತ್ತು ಇದೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು,

**ಕುಮಟಾ**